4033/5075/6035/7035/8003

VI Semester 3 Years LL.B./VIII Semester 5 Years B.A.,LL.B. (Maj.-Min. System)/B.B.A.,LL.B./ B.Com.,LL.B. Examination, July/August 2026
BHARATIYA SAKSHYA ADHINIYAM, 2023

Duration : 3 Hours | Max. Marks : 80

Instructions :
1. **Answer all five Units.**
2. **One essay type question and short note/problems is compulsory from each Unit.**
3. **Figures to the right indicate marks.**
4. **Answer should be written either in English or Kannada completely.**

Q. No. 1. (a) Explain the relevancy of facts forming part of same transaction with illustrations. Marks : 10
ಒಂದೇ ವ್ಯವಹರಣೆಯ ಭಾಗವಾಗಿರುವ ವಾಸ್ತವಿಕತೆಗಳ ಸುಸಂಬದ್ಧತೆಯನ್ನು ಉದಾಹರಣೆಗಳೊಂದಿಗೆ ವಿವರಿಸಿರಿ.

OR/ಅಥವಾ

Q. No. 1. (a) Discuss the relevancy of facts relating to motive, preparation and conduct. Marks : 10
ಧ್ಯೇಯ, ಸಿದ್ಧತೆ ಮತ್ತು ನಡತೆಗೆ ಸಂಬಂಧಿಸಿದ ಸಂಗತಿಗಳ ಸುಸಂಬದ್ಧತೆಯನ್ನು ಚರ್ಚಿಸಿ.

Q. No. 1. (b) Write a short note on admission. Marks : 6
ಅಂಗೀಕಾರದ ಮೇಲೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 1. (b) Write a short note on test identification parade. Marks : 6
ಗುರುತಿನ ಕವಾಯತು ಪರೀಕ್ಷೆ ಮೇಲೆ ಲಘು ಟಿಪ್ಪಣಿ ಬರೆಯಿರಿ.

Q. No. 2. (a) Define confession. Explain the law relating to relevancy and admissibility of confessions. Marks : 10
ತಪ್ಪೊಪ್ಪಿಗೆಯನ್ನು ವ್ಯಾಖ್ಯಾನಿಸಿ. ತಪ್ಪೊಪ್ಪಿಗೆಗಳ ಸುಸಂಬದ್ಧತೆ ಮತ್ತು ಅದರ ಅಂಗೀಕಾರಕ್ಕೆ ಸಂಬಂಧಿಸಿದ ಕಾನೂನನ್ನು ವಿವರಿಸಿ.

OR/ಅಥವಾ

Q. No. 2. (a) Discuss the cases in which statements of relevant fact by person who is dead or cannot be found are relevant under the Bharatiya Sakshya Adhiniyam. Marks : 10
ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಮೃತ ಅಥವಾ ಪತ್ತೆ ಇಲ್ಲದ ವ್ಯಕ್ತಿಗಳ ಸುಸಂಬದ್ಧ ಘಟನೆಗಳ ಹೇಳಿಕೆಗಳ ಸುಸಂಬದ್ಧತೆಯನ್ನು ಚರ್ಚಿಸಿ.

Q. No. 2. (b) Write a short note on dying declaration. Marks : 6
ಮರಣಕಾಲಿಕ ಹೇಳಿಕೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 2. (b) 'A' is accused of murder of 'C'. During trial 'A' confesses, I and 'B' murdered 'C'. Can this confession be considered against 'B' ? Marks : 6
'ಅ' ನು 'ಕ' ಎಂಬುವನನ್ನು ಕೊಲೆ ಮಾಡಿದ ಆರೋಪಕ್ಕೊಳಗಾಗಿದ್ದಾನೆ. ವಿಚಾರಣೆ ಕಾಲಕ್ಕೆ ಅವನು, ನಾನು ಮತ್ತು 'ಬ' ನು ಸೇರಿ 'ಕ' ನನ್ನು ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಗೆಯನ್ನು ಮಾಡಿರುತ್ತಾನೆ. ಈ ತಪ್ಪೊಪ್ಪಿಗೆಯನ್ನು 'ಬ' ನ ವಿರುದ್ಧ ಪರಿಗಣಿಸಬಹುದೇ ?

P.T.O.

Q. No. 3. (a) What are public documents ? How they are proved ? Marks : 10
ಸಾರ್ವಜನಿಕ ದಸ್ತಾವೇಜು ಎಂದರೇನು ? ಅವುಗಳನ್ನು ಹೇಗೆ ಸಾಬೀತು ಪಡಿಸಬಹುದು ?

OR/ಅಥವಾ

Q. No. 3. (a) Define secondary evidence and state the cases in which secondary evidence relating to documents may be given. Marks : 10
ದ್ವಿತೀಯಕ ಸಾಕ್ಷ್ಯವನ್ನು ವ್ಯಾಖ್ಯಾನಿಸಿರಿ ಮತ್ತು ಯಾವ ಸಂದರ್ಭಗಳಲ್ಲಿ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ದ್ವಿತೀಯಕ ಸಾಕ್ಷ್ಯ ಕೊಡಬಹುದೆಂಬುದನ್ನು ತಿಳಿಸಿರಿ.

Q. No. 3. (b) Write a note on character evidence. Marks : 6
ನಡತೆಯ ಸಾಕ್ಷ್ಯದ ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 3. (b) The accused charged with rape seeks to prove a fact which indicates the loose character of the complainant. Is it admissible ? Marks : 6
ಅತ್ಯಾಚಾರದ ಆರೋಪಿಯು ದೂರುದಾರಳು ಸಡಿಲ ಚಾರಿತ್ರ್ಯ ಹೊಂದಿರುವಳೆಂದು ಸೂಚಿಸುವ ಘಟನೆಯನ್ನು ರುಜುವಾತು ಪಡಿಸಲು ಇಚ್ಛಿಸಿದ್ದಾನೆ. ಇದನ್ನು ಅಂಗೀಕರಿಸಬಹುದೇ ?

Q. No. 4. (a) Explain presumption in rape and dowry cases. Marks : 10
ಅತ್ಯಾಚಾರ ಮತ್ತು ವರದಕ್ಷಿಣೆ ಸಾವು ಪ್ರಕರಣಗಳಲ್ಲಿನ ಪೂರ್ವಭಾವನೆಯನ್ನು ವಿವರಿಸಿರಿ.

OR/ಅಥವಾ

Q. No. 4. (a) Define estoppel. Explain the different kinds of estoppel. Marks : 10
ವಿಬಂಧವನ್ನು ವ್ಯಾಖ್ಯಾನಿಸಿ. ವಿಬಂಧದ ವಿವಿಧ ಪ್ರಕಾರಗಳನ್ನು ವಿವರಿಸಿರಿ.

Q. No. 4. (b) Write a note on presumption of legitimacy of a child. Marks : 6
ಮಗುವಿನ ಧರ್ಮಜತೆ ಕುರಿತು ಇರುವ ಪೂರ್ವಭಾವನೆ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 4. (b) 'A' sues 'B' for money due on a bond. 'B' has admitted the execution of bond but contends that it was obtained by fraud. 'A' denies it. On whom does the burden of proof lies ? Marks : 6
ಒಂದು ಬಾಂಡಿನನ್ವಯ ಬರಬೇಕಾದ ಹಣಕ್ಕಾಗಿ 'ಅ'ನು 'ಬ'ನ ವಿರುದ್ಧ ದಾವೆ ಹಾಕಿರುವನು. 'ಬ'ನು ಆ ಬಾಂಡ್ ಪತ್ರ ಬರೆದುಕೊಟ್ಟಿದ್ದನ್ನು ಒಪ್ಪಿಕೊಂಡಿದ್ದಾನೆ, ಆದರೆ ಅದನ್ನು ಮೋಸದಿಂದ ಬರೆಯಿಸಿಕೊಳ್ಳಲಾಗಿದೆ ಎಂದು ವಾದಿಸಿದ್ದಾನೆ. 'ಅ'ನು ಅದನ್ನು ಅಲ್ಲಗೆಳೆದಿದ್ದಾನೆ. ಯಾರ ಮೇಲೆ ರುಜುವಾತಿನ ಹೊಣೆಗಾರಿಕೆ ಇದೆ ?

Q. No. 5. (a) Explain 'Examination-in-chief', Cross-examination and 'Re-examination'. Marks : 10
'ಮುಖ್ಯ ವಿಚಾರಣೆ', 'ಪಾಟೀ ಸವಾಲು' ಮತ್ತು 'ಮರು-ವಿಚಾರಣೆ'ಗಳನ್ನು ವಿವರಿಸಿರಿ.

OR/ಅಥವಾ

Q. No. 5. (a) Explain the privileged communications. Marks : 10
ಎಶೇಷಾಧಿಕಾರದ ಸಂವಹನಗಳನ್ನು ವಿವರಿಸಿರಿ.

Q. No. 5. (b) Write a note on leading questions. Marks : 6
ಉತ್ತರ ಸೂಚಕ ಪ್ರಶ್ನೆಗಳ ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. (b) A 5 year old girl appears as a witness and states that the accused, her step-mother, had thrown her and younger sister into a well. Is she competent to testify ? Marks : 6
ಒಬ್ಬ 5 ವರ್ಷದ ಬಾಲಕಿಯು ಸಾಕ್ಷಿದಾರಳಾಗಿ ಹಾಜರಾಗಿ, ಆರೋಪಿ ತನ್ನ ಮಲತಾಯಿ, ತನ್ನನ್ನು ಮತ್ತು ಕಿರಿಯ ಸಹೋದರಿಯನ್ನು ಬಾವಿಗೆ ತಳ್ಳಿದಳು ಎಂದು ಹೇಳುತ್ತಾಳೆ. ಆ ಬಾಲಕಿ ಸಾಕ್ಷಿ ನುಡಿಯಲು ಅರ್ಹಳೇ ?